ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ: ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./ GM(C-I)/ED/998/2019-20

ದಿನಾಂಕ:
Date 18-02-2020

ಸುತ್ತೋಲೆ ಸಂಖ್ಯೆ 1002 (ಸಿ)

| | |
|---|---|
| ವಿಷಯ | ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ – ವಿಶೇಷ ಘಟಕ / ಗಿರಿಜನ ಉಪ ಯೋಜನೆ ಅಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ.ಎಂ.ಇ) ಘಟಕಗಳಿಗೆ ಸಾಲ ಯೋಜನೆ. |
| ಉಲ್ಲೇಖ | 1) ಹಿಂದಿನ ಸುತ್ತೋಲೆ ಸಂಖ್ಯೆ 1002 ದಿನಾಂಕ 02-06-18<br>2) ಸುತ್ತೋಲೆ ಸಂಖ್ಯೆ 1002(ಎ) ದಿನಾಂಕ 24-07-2018.<br>3) ಸುತ್ತೋಲೆ ಸಂಖ್ಯೆ 1002 ( ಬಿ) ದಿನಾಂಕ 01-01-2019<br>4) ಸರ್ಕಾರದ ಆದೇಶ ಸಂಖ್ಯೆ : ವಾ ಕೈ 44 ಜಕೈಯೋ 2017 ದಿನಾಂಕ 24 -11-2018. |

ಮೇಲ್ಕಾಣಿಸಿದ ಉಲ್ಲೇಖದ ಪ್ರಕಾರ ಈ ಯೋಜನೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಮಾರ್ಗಸೂಚಿಗಳನ್ನು ಸರ್ಕಾರದ ಆದೇಶದನ್ವಯ ಹಾಗೂ ಸಂಸ್ಥೆ ಯ ಸಾಲ ನೀತಿ ನಿಯಮಾವಳಿಗನುಗುಣವಾಗಿ ಪಾಲಿಸಲು ಆದೇಶಿಸಲಾಗಿದೆ.

ಸರ್ಕಾರದ ಆದೇಶದನ್ವಯ ಈ ಕೆಳಕಾಣಿಸಿ ದ ಷರತ್ತುಗಳನ್ನು ಪಾಲಿಸಬೇಕು.

- ಸರ್ಕಾರದ ಮೊದಲನೇ ಕಂತಿಕೆ ಬಿಡುಗಡೆಯಾದ 18 ತಿಂಗಳ ಅವಧಿಯೊಳಗೆ ಈ ಯೋಜನೆಯಡಿ ಮಂಜೂರಾದ ಘಟಕವು ಅನುಷ್ಠಾನಗೊಂಡು ಕಾರ್ಯೋನ್ಮುಖವಾಗತಕ್ಕದ್ದು ತಪ್ಪಿದಲ್ಲಿ ಸರ್ಕಾರದ ಮಂಜೂರಾತಿ ಆದೇಶವನ್ನು ಪುನರ್ ಪರಿಶೀಲಿಸಲಾಗುವುದು ಅಥವಾ ರದ್ದುಪಡಿಸಲಾಗುವುದು.

- ಈ ಯೋಜನೆಯಡಿ ಮಂಜೂರಾದ ಘಟಕವು ಕನಿಷ್ಟ 05 ವರ್ಷಗಳ ಕಾಲ ನಿರಂತರವಾಗಿ ಚಾಲನೆಯಲ್ಲಿರತಕ್ಕದ್ದು. ಘಟಕವು ಈ ಮೊದಲ 5 ವರ್ಷಗಳ ಅವಧಿಯಲ್ಲಿ ನಿರಂತರವಾಗಿ ಒಂದು ವರ್ಷದ ಅವಧಿಗೆ ಸ್ಥಗಿತಗೊಂಡ ಪಕ್ಷದಲ್ಲಿ ಇಲಾಖೆಯಿಂದ ಬಿಡುಗಡೆಯಾದ ಪೂರ್ಣ ಅನುದಾನವನ್ನು ಸರ್ಕಾರಕ್ಕೆ ಮರುಪಾವತಿಸತಕ್ಕದ್ದು. ತಪ್ಪಿದಲ್ಲಿ ಭೂ ಕಂದಾಯ ಕಾಯ್ದೆಯಡಿ ವಸೂಲಾತಿಗೆ ಕ್ರಮವ ಹಿಸಲಾಗುವುದು.

- ಸರ್ಕಾರ ಅಥವಾ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸುವ ಷರತ್ತು ಹಾಗೂ ನಿಬಂಧನೆ ಗಳನ್ನು ಪಾಲಿಸತಕ್ಕದ್ದು.

ಈ ಮೇಲಿನ ಷರತ್ತುಗಳನ್ನು ಸಂಸ್ಥೆಯು ನೀಡುವ ಸಾಲ ಮಂಜೂರಾತಿ ಪತ್ರದಲ್ಲಿ ಸೇರಿಸಲು ಆದೇಶಿಸಲಾಗಿದೆ. ಈಗಾಗಲೇ ಸಾಲಮಂಜೂರಾತಿ ಪತ್ರ ನೀಡಿದ್ದಲ್ಲಿ ಮೇಲ್ಕಾಣಿಸಿದ ಷರತ್ತುಗಳನ್ನು ಅಳವಡಿಸಿ Addendum ಅನ್ನು ನೀಡಿ ಪ್ರವರ್ತಕರ ಸ್ವೀಕೃತಿಯನ್ನು ಪಡೆ ಯುವುದು.

ಉಳಿದಂತೆ ಈ ಹಿಂದಿನ ಉಲ್ಲೇಖದ ಸುತ್ತೋಲೆಗಳಲ್ಲಿ ನೀಡಿರುವ ಎಲ್ಲಾ ನಿಬಂಧನೆಗಳು ಹಾಗೂ ನಿಯಮಾವಳಿಗಳು ಅನ್ವಯವಾಗುವುದು.

18/02/2020.
ಕಾರ್ಯನಿರ್ವಾಹಕ ನಿರ್ದೇಶಕರು – I

ಎಲ್ಲಾ ಶಾಖಾ ಕಛೇರಿಗಳ ಶಾ.ವ್ಯ / ಸ.ಪ್ರ.ವ್ಯ / ಉ. ಪ್ರವ್ಯ ರವರಿಗೆ
ಎಲ್ಲಾ ಸ.ಪ್ರ.ವ್ಯ – ಆ.ಲೆ.ಪ ವಿಭಾಗಗಳಿಗೆ
ಪ್ರಧಾನ ಕಛೇರಿಯ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ
ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯನಿರ್ವಾಹಕ ನಿರ್ದೇಶಕರು – 2

ಪ್ರಧಾನ ಕಛೇರಿ: ಕೆ.ಎಸ್.ಎಫ್.ಸಿ ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು – 560 052
ದೂರವಾಣಿ ಸಂಖ್ಯೆ ಸಾಮಾನ್ಯ: 22263322 ಫ್ಯಾಕ್ಸ್: 080-22250126 ಇ-ಮೇಲ್: info@ksfc.in ವೆಬ್: www.ksfc.in
HEAD OFFICE: KSFC Bhavan, No. 1/1, Thimmaiah Road, Near Cantonment Railway Station, Bengaluru - 560 052
Telephone: Gen: 22263322 Fax: 080-22250126 e-mail: info@ksfc.in Website: www.ksfc.in